**ಸಾಕ್ಷಿಯನ್ನು ದಿನಾಂಕಃ 15.04.2025 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎಂ.ಎಸ್.ಎಚ್. ಎದುರುದಾರ ಪರ ವಕೀಲರಿಂದ ಃ**

ನಾನು 12 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಎದುರುದಾರನ ಜೊತೆ ಮದುವೆಯಾಗುವ ಕಾಲಕ್ಕೆ ನನ್ನ ವಯಸ್ಸು ಸುಮಾರು 38 ರಿಂದ 39 ಆಗಿತ್ತು. ನಾನು ಮದುವೆಯ ಪೂರ್ವದಲ್ಲಿ ನೌಕರಿ ಮಾಡುತ್ತಿದ್ದೆ ಎಂದರೆ ಸರಿ. ಎದುರುದಾರನಿಗೆ ಸದರಿ ಮದುವೆ ಎರಡನೇ ಮದುವೆ ಆಗಿತ್ತು ಎಂದರೆ ಸರಿ, ಈ ವಿಚಾರ ಎದುರುದಾರ ನನಗೆ ಮದುವೆಯ ಪೂರ್ವದಲ್ಲಿಯೇ ತಿಳಿಸಿದ್ದರು ಎಂದರೆ ಸರಿ. ಎದುರುದಾರನಿಗೆ ಆತನ ಮೊದಲನೇ ವೈವಾಹಿಕ ಜೀವನದಿಂದ ಎರಡು ಹೆಣ್ಣು ಮಕ್ಕಳು ಜನಿಸಿರುವ ವಿಷಯ ನನಗೆ ತಿಳಿಸಿದ್ದ ಎಂದರೆ ಸರಿ. ಎದುರುದಾರ ಆತನ ತಂದೆ ತಾಯಿ, ಸಹೋದರ ಮತ್ತು ಆತನ ಹೆಂಡತಿ ಮಕ್ಕಳು ಒಟ್ಟಿಗೆ ಒಂದೇ ಮನೆಯಲ್ಲಿ ಜಂಟಿಯಾಗಿ ವಾಸಿಸುತ್ತಿರುವ ವಿಷಯ ನನಗೆ ತಿಳಿಸಿದ್ದ ಎಂದರೆ ಸರಿ.

ವಿವಾಹ ಪೂರ್ವದಲ್ಲಿ ಎದುರುದಾರ ತನಗೆ ಚಿಕ್ಕ ಮಕ್ಕಳು ಮತ್ತು ವಯಸ್ಸಾದ ತಂದೆ, ತಾಯಿ ಇದ್ದಾರೆ, ಅವರನ್ನು ನೋಡಿಕೊಂಡು ಹೋಗಬೇಕೆಂದು ಹೇಳಿದ್ದರು ಎಂದರೆ ಸರಿ. ಎದುರುದಾರನ ಈ ಮಾತಿಗೆ ನಾನು ಒಪ್ಪಿಕೊಂಡ ನಂತರವೇ ನನ್ನನ್ನು ಮದುವೆಯಾಗಿದ್ದರು ಎಂದರೆ ಸರಿ. ಎದುರುದಾರನಿಗೆ ನಾನು ನೀಡಿದ ಮಾತಿನ ಪ್ರಕಾರ ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಮದುವೆಯ ಎಲ್ಲ ಖರ್ಚು ವೆಚ್ಚವನ್ನು ಎದುರುದಾರ ನೋಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಮದುವೆಯ ಕಾಲಕ್ಕೆ ಎದುರುದಾರನ ನನಗೆ ಬಂಗಾರದ ಒಡವೆ ನೀಡಿದ್ದರು ಎಂದರೆ ಸರಿಯಲ್ಲ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರನ ಮೊದಲನೇ ಹೆಂಡತಿ ಯಾವ ರೀತಿ ಮೃತಳಾದಳು ಎಂದು ನನಗೆ ಎದುರುದಾರನ ಮದುವೆಗೆ ಮೊದಲೇ ತಿಳಿಸಿದ್ದರು ಎಂದರೆ ಸರಿಯಲ್ಲ. ಎದುರುದಾರನ ಮೊದಲನೇ ಹೆಂಡತಿ ಆಕೆಯ ಹೆರಿಗೆಯ ಸಮಯದಲ್ಲಿ ಮೆದುಳಿಗೆ ಸ್ಟ್ರೋಕ್ ಆಗಿದ್ದರಿಂದ ಆಕೆಯನ್ನು ಗುಣಪಡಿಸಲು ಸುಮಾರು 25 ರಿಂದ 30 ಲಕ್ಷ ರೂ ಸಾಲ ಮಾಡಿ, ಉಪಚಾರ ಕೊಡಿಸಿರುವ ವಿಷಯ ಎದುರುದಾರ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಎದುರುದಾರನಿಗೆ ಚಿಕ್ಕ ಮಕ್ಕಳಿದ್ದ ಕಾರಣ ಆತನ ಮನೆಯವರು ಮಕ್ಕಳನ್ನು ನೋಡಿಕೊಳ್ಳುವ ಉದ್ದೇಶಕ್ಕೆ ಮತ್ತು ಎದುರುದಾರನ ಶ್ರೇಯೋಭಿವೃದ್ಧಿಗೆ ಎರಡನೇ ಮದುವೆ ಆಗು ಎಂದು ಹೇಳಿದ್ದಕ್ಕೆ ನನ್ನನ್ನು ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಎದುರುದಾರನಿಗೆ ಇನ್ನು ಸಾಕಷ್ಟು ವಯಸ್ಸು ಇದ್ದ ಕಾರಣ ಮತ್ತು ಮಕ್ಕಳು ಚಿಕ್ಕವರಿದ್ದ ಕಾರಣ ಅವರನ್ನು ನೋಡಿಕೊಳ್ಳಲು ನನ್ನೊಟ್ಟಿಗೆ ಮದುವೆ ಮಾಡಿಸಿದ್ದರು ಎಂದರೆ ಸರಿಯಲ್ಲ. ಮದುವೆಯಾದ ದಿನ ಎದುರುದಾರನ ಮನೆಗೆ ವೈವಾಹಿಕ ಜೀವನ ನಡೆಸಲು ನನ್ನನ್ನು ಕರೆದುಕೊಂಡು ಹೋದರು ಎಂದರೆ ಸರಿ.

ಸದರಿ ದಿನ ನಾನು ವಾಹನದಲ್ಲಿ ಹೋಗುತ್ತಿರುವಾಗ ಎದುರುದಾರನ ಚಿಕ್ಕ ಮಗಳು ನಮ್ಮಿಬ್ಬರ ಮಧ್ಯ ಬಂದು ಕುಳಿತಳು ಎಂದರೆ ಸರಿ. ಆ ಕಾರಣಕ್ಕೆ ನಾನು ಮಕ್ಕಳು ಎಷ್ಟು ಕಿರಿಕಿರಿ ಮಾಡುತ್ತಾರೆ ಎಂದು, ಎದುರುದರನ ಜೊತೆ ಜಗಳ ತೆಗೆದೆ ಎಂದರೆ ಸರಿಯಲ್ಲ. ನಾನು ಎದುರುದಾರನ ಮನೆಗೆ ಹೋಗುವ ಮೊದಲೆ ಆತನ ಜೊತೆ ಜಗಳ ಮಾಡಿಕೊಂಡೆ ಎಂದರೆ ಸರಿಯಲ್ಲ. ಎದುರುದಾರನ ಮನೆಗೆ ಹೋದ ನಂತರ ನಾನು ಎದುರುದಾರ, ಆತನ ಮಕ್ಕಳು ಮತ್ತು ತಂದೆ ತಾಯಿಯರಿಗೆ ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಮದುವೆಯ ಕಾಲಕ್ಕೆ ಕರೋನಾ ಸಾಂಕ್ರಮಿಕ ರೋಗ ಇತ್ತು ಎಂದರೆ ಸರಿಯಲ್ಲ. ಮದುವೆಯ ನಂತರ ಕರೋನಾ ಸಾಂಕ್ರಮಿಕ ರೋಗ ಇದ್ದ ಕಾರಣ ಎದುರುದಾರ ನನಗೆ ಕರೆದುಕೊಂಡು ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಓಡಾಡಲು ಅನುಮತಿ ಇರಲಿಲ್ಲ, ಆದರೆ ಸ್ಥಳೀಯವಾಗಿ ಓಡಾಡಲು ಅನುಮತಿ ಇತ್ತು ಎಂದು ನುಡಿಯುತ್ತಾರೆ. ಎದುರುದಾರನಿಗೆ ನಾನು ಹೊರಗಡೆ ಕರೆದುಕೊಂಡು ಹೋಗು ಎಂದು ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರನ ಜೊತೆ ಜಗಳ ಮಾಡಿ, ತವರು ಮನೆಗೆ ಹೋಗುತ್ತೇನೆ ಎಂದು ಹೆದರಿಸುತ್ತಿದ್ದೆ ಎಂದರೆ ಸರಿಯಲ್ಲ.

ಮದುವೆಯ ನಂತರ ಮೂರು ತಿಂಗಳುಗಳ ಕಾಲ ಎದುರುದಾರನ ಮನೆಯಲ್ಲಿಯೇ ಇದ್ದು, ನಂತರ ತವರು ಮನೆಗೆ ಬಂದಿದ್ದೆ ಎಂದರೆ ಸರಿಯಲ್ಲ. ನಾನು ಎದುರುದಾರನ ಜೊತೆ ಆತನ ಮನೆಯಲ್ಲಿ ಇದ್ದಾಗ ಆತನ ಮೇಲೆ ಸುಮ್ಮನೆ ಸಂಶಯ ಪಡುವದು ಮತ್ತು ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಮುಂದುವರಿದು ಸಾಕ್ಷಿ ದಿಃ 10.02.2019 ರಂದು ಎದುರುದಾರನ ಹುಟ್ಟುಹಬ್ಬ ಇರುವ ನಿಮಿತ್ಯ ತನ್ನ ಅತ್ತೆಗೆ ತನ್ನ ಗಂಡ (ಎದುರುದಾರನ) ಹುಟ್ಟು ಹಬ್ಬ ತಾನೇ ಆಚರಿಸುವದಾಗಿ ಹೇಳಿದಕ್ಕೆ ಅವರು ಒಪ್ಪಿಕೊಂಡಿದ್ದರು ಆದರೆ ಹುಟ್ಟುಹಬ್ಬದ ದಿನ ಎದುರುದಾರನ ತಮ್ಮನ ಹೆಂಡತಿ ಸ್ವತಃ ತಾನೇ ಕೇಕ್ ತಂದಿದ್ದಕ್ಕೆ ಸಿಟ್ಟಾಗಿ ನನ್ನ ಅತ್ತೆ ಮತ್ತು ಮೈದುನ ನನ್ನ ಗಂಡನ ತಮ್ಮನ ಹೆಂಡತಿಗೆ ಬೈದು ಹೊಡೆದರು ಎಂದು ನುಡಿಯುತ್ತಾರೆ. ನನ್ನ ಗಂಡನ ಹುಟ್ಟು ಹಬ್ಬಕ್ಕೆ ಎಲ್ಲರೂ ಸೇರಿ ಕೇಕ್ ತಂದಿದ್ದರೂ ಸಹ, ನಾನೇ ಸಂಶಯಪಟ್ಟು ಜಗಳ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಎದುರುದಾರನ ಮನೆಯವರು ನನ್ನ ಮೈದುನನ ಹೆಂಡತಿಗೆ ಹೊಡಿ ಬಡಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರನ ಜೊತೆ ನಾನು ಪ್ರತಿ ಕ್ಷಣಕ್ಕೂ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರ ಮುಂಬೈನಲಿ ಮೋಬೈಲ ರಿಪೇರಿ ಅಂಗಡಿ ನಡೆಸುತ್ತಿದ್ದ ಎಂದರೆ ಸರಿ, ಮುಂದುವರಿದು ಸಾಕ್ಷಿ ಆತನ ಜೊತೆ ಅಂಗಡಿಗೆ ತಾನು ಸಹ ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ಅಂಗಡಿಯಲ್ಲಿ ಬರುವ ಮಹಿಳಾ ಗ್ರಾಹಕರ ಜೊತೆ ಎದುರುದಾರ ಮಾತನಾಡಿಸಿದರೇ ನಾನು ಸಂಶಯಪಟ್ಟು ಆತನ ಜೊತೆ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ವಿನಾಕಾರಣ ತಂಟೆ ಮಾಡಿ, ನಾನು ತವರುಮನೆಗೆ ಬಂದೆ ಎಂದರೆ ಸಾಕ್ಷಿ ಎದುರುದಾರ ಹೊಡಿ ಬಡಿ ಮಾಡಿ, ಕಳುಹಿಸಿಕೊಟ್ಟಿದ್ದಾನೆ ಎಂದು ನುಡಿಯುತ್ತಾರೆ. ಮುಂದುವರಿದು ಸಾಕ್ಷಿ ಎದುರುದಾರ ಸ್ವತಃ ನನ್ನ ತವರು ಮನೆಗೆ ಬಂದು, ಬಿಟ್ಟು ಹೋಗಿದ್ದಾರೆ ಎಂದು ನುಡಿಯುತ್ತಾರೆ. ನಾನು ಎದರುದಾರನ ಮಕ್ಕಳ ಜೊತೆ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಎದುರುದಾರನ ಮನೆಯವರ ಜೊತೆ ಕೂಡಾ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಎದುರುದಾರನ ಜೊತೆ ಮೂರು ವರ್ಷ ವೈವಾಹಿಕ ಜೀವನ ನಡೆಸಿದ್ದು, ಆ ಅವಧಿಯಲ್ಲಿ ಸುಮಾರು 10 ಸಾರಿ ನನ್ನ ತವರು ಮನೆಗೆ ಬಂದು ಹೋಗಿ ಮಾಡಿದ್ದೇನೆ ಎಂದರೆ ಸಾಕ್ಷಿ ಮೂರು ವರ್ಷಗಳಲ್ಲಿ ಎರಡು ವರ್ಷ ಕೋವಿಡ ಸಾಂಕ್ರಾಮಿಕ ರೋಗ ಇದ್ದ ಕಾರಣ ಕೇವಲ ಎರಡು ಸಾರಿ ಮಾತ್ರ ಬಂದು ಹೋಗಿದ್ದೇನೆ ಎಂದು ನುಡಿಯುತ್ತೆರೆ. ನಾನು 8.10 ಸಾರಿ ತವರು ಮನೆಗೆ ಬಂದಿದ್ದಕ್ಕೆ ಎದರುದಾರ ಸ್ವತಃ ತಾನೇ ಬಂದು ನನ್ನನ್ನು ಕರೆದುಕೊಂಡು ಹೋಗುತ್ತಿದ್ದ ಆಗಲೂ ಸಹ ನಾನು ಆತನೊಂದಿಗೆ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ಈಗ ನಾನು ನನ್ನ ತಂದೆ ತಾಯಿ ಜೊತೆ ತವರು ಮನೆಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಬಾಡಿಗೆ ಮನೆಯಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ ಮನೆತನಕ್ಕೆ ಸುಮಾರು 15 ಎಕರೆ ಜಮೀನು ಇದೆ ಎಂದರೆ ಸಾಕ್ಷಿ 8 ಎಕರೆ ಇದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಪೈಕಿ ಎರಡು ಎಕರೆ ಜಮೀನನ್ನು ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಇಂದಿರಾ ಆವಾಸ ಯೋಜನೆ ಅಡಿ ನನ್ನ ಹೆಸರಲ್ಲಿ ಒಂದು ಮನೆ ಸಹ ಕಟ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗಲೂ ಸಹ ನಾನು ಅದೇ ಮನೆಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮದುವೆಯ ಪೂರ್ವದಲ್ಲಿ ಮಾಡುತ್ತಿದ್ದ ಕೆಲಸವನ್ನು ಈಗಲೂ ಸಹ ಮುಂದುವರಿಸಿಕೊಂಡು ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಲ್ಲಿ ಜಮೀನು ಮತ್ತು ಮನೆ ಇದೆ ಹಾಗೂ ಕೆಲಸ ಕೂಡಾ ಇದೆ ಎಂದರೆ ಸರಿಯಲ್ಲ.

ಎದುರುದಾರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/

ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ